ನಿಯಮ ೫೫ಳಿರ ಮೇರೆಗೆ

(೧) ಪುತ್ತೂರು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಮಳೆಯಿಲ್ಲದೆ ಬೆಳೆ ಹಾಳಾಗಿರುವುದು

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು). —ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕು ಹಾಗೂ ಬಂಟ್ವಾಳ ತಾಲ್ಲೂಕಿಗೆ ಹೊಂದಿಕೊಂಡು ದಕ್ಷಿಣ ಕನ್ನಡದ ನಾನಾಕಡೆ ಮಳೆಯು ಅಭಾವದಿಂದಾಗಿ ಸುಗ್ಗಿ ಬೆಳೆಯು ಸಂಪೂರ್ಣವಾಗಿ ಹಾಳಾಗಿ ಹೋಗಿರುತ್ತದೆ. ಇದರಿಂದ ಭತ್ತದ ಬೆಳೆ ಮಾಡುವಂಥ ರೈತರಿಗೆ ವಿಪರೀತ ಕಷ್ಟನಷ್ಟ ಉಂಟಾಗಿದೆ. ಆದುದರಿಂದ ಸರ್ಕಾರ ಇದರ ಬಗ್ಗೆ ಕ್ಷಿಪ್ರ ಸಮಯಕ್ಕೆ ನೆರವಿಗೆ ಬರದೇ ಹೋದರೆ ರೈತರಿಗೆ ಸುಗ್ಗಿ ಬೆಳೆಯನ್ನೇ ನಂಬಿರುವ ರೈತರಿಗೆ ಪರಿಹಾರ ಒದಗಿಸಿ ರೈತರಿಗೆ ಬಂದಂಥ ಅನಿರೀಕ್ಷಿತ ತೊಂದರೆಯನ್ನು ನಿವಾರಣೆ ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು). —ರಾಜ್ಯದ ಕೆಲವು ಭಾಗಗಳಲ್ಲಿ ಮುಂಗಾರು ಬೆಳೆಯು ವಿಳಂಬತೆಯಿಂದಾಗಿ ವಿಶೇಷವಾಗಿ ಮಲೆನಾಡು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಬಿತ್ತಿದ ಭತ್ತದ ಬೀಜವು, ಸಕಾಲಕ್ಕೆ ಮಳೆಯಾಗದೇ ಅಥವಾ ಕೆಲವು ಸಂದರ್ಭಗಳಲ್ಲಿ ವಿಪರೀತ ಮಳೆಯಿಂದ, ನಾಶವಾಗಿ ರೈತರಿಗೆ ಬಹಳ ತೊಂದರೆಯಾಗಿದ್ದ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು, ಇಂತಹ ರೈತರಿಗೆ ಪರ್ಯಾಯ ಬೆಳೆಗಳನ್ನು ಬೆಳೆದು ಆಗಿದ್ದ ಕಷ್ಟವನ್ನು ಸಾಕಷ್ಟು ಕಡಿಮೆ ಮಾಡುವ ಸಲುವಾಗಿ ಅವರಿಗೆ ಎಣ್ಣೆ ಬೀಜಗಳು ಮತ್ತು ದ್ವಿದಳ ಧಾನ್ಯಗಳ ಪರ್ಯಾಯ ಬೆಳೆಗಳನ್ನು ಎಲ್ಲೆಲ್ಲಿ ಬೆಳೆಯಲು ಸಾಧ್ಯ ಇದೆಯೋ ಅಲ್ಲಲ್ಲಿ ಬೆಳೆಯಲು ಅನುವು ಮಾಡಿಕೊಡುವ ಸಲುವಾಗಿ ಬೀಜ ಗಳನೊಳಗೊಂಡ ಮಿನಿಕಿಟ್ಸ್‌ಗಳನ್ನು ೨೦೦ ರೂಪಾಯಿಗಳಿಗೆ ವಿತರಣೆಯ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಉಚಿತವಾಗಿ ನೀಡಲು ಆದೇಶಗಳನ್ನು ಹೊರಡಿಸಲಾಗಿದೆ. ಈ ಚೀಲಗಳ ವಿತರಣೆ ಯೋಜನೆಯಲ್ಲಿ ಈ ಕೆಳಕಂಡ ಬೆಳೆಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕ್ರಮ ಸಂಖ್ಯೆ	ಬೆಳೆಯ ಹೆಸರು	ವಿಸ್ತೀರ್ಣ	ಅವಶ್ಯಕ ಬೀಜ (ಕೆ. ಜಿ. ಗಳ ಪ್ರಮಾಣದಲ್ಲಿ)	ಅಂದಾಜು ತಗಲುವ ವೆಚ್ಚ ರೂ. ಗಳಲ್ಲಿ)
೧.	ಸೂರ್ಯಕಾಂತಿ	೧ ಹೆಕ್ಟೇರು	೧೨	೧೫೫.೦೦
೨.	ನೆಲಗಡಲೆ	$\frac{1}{2}$ ಎಕರೆ	೨೦	೨೦೦.೦೦
೩.	ಹೆಸರು	೧ ಹೆಕ್ಟೇರು	೧೫	೧೬೫.೦೦
೪.	ಉದ್ದು	೧ ಹೆಕ್ಟೇರು	೧೫	೧೬೫.೦೦

೨. ಈ ಕೃಷಿ ಚೀಲಗಳನ್ನು ಉತ್ತರ ಕನ್ನಡ, ಧಾರವಾಡ, ಬೆಳಗಾವಿ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಒಟ್ಟು ೨೫.೦೦ ಲಕ್ಷ ರೂ. ಗಳ ವೆಚ್ಚದಲ್ಲಿ ವಿತರಣೆ ಮಾಡಲು ಹೊರಡಿಸಲಾಗಿದೆ.

೩. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತಹ ಅಭಾವ ಪರಿಸ್ಥಿತಿ ಉಂಟಾಗಿಲ್ಲವೆಂದೂ ಹಾಗೂ ಕುಡಿಯುವ ನೀರು ಮತ್ತು ಮೇವು ಒದಗಿಸುವ ತೊಂದರೆಯೂ ಇರುವುದಿಲ್ಲವೆಂದೂ ವರದಿಯಾಗಿದೆ

೪. ಆದರೆ ಸುಗ್ಗಿ ಬೆಳೆ ಹಾಳಾಗಿ ಭತ್ತ ಬೆಳೆಯುವ ರೈತರಿಗೆ ನಷ್ಟ ಉಂಟಾಗಿ ಅವರು ತೊಂದರೆಯಾಗಿರುವ ಬಗ್ಗೆ ವರದಿ ಇರುವುದಿಲ್ಲ. ಈ ವಿಷಯವಾಗಿ ಜಿಲ್ಲಾಧಿಕಾರಿಗಳಿಂದ ತ್ವರಿತವಾಗಿ ವರದಿ ತರಿಸಿ, ಅಗತ್ಯವೆನಿಸಿದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(೨) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗುಬ್ಬಿನಹಳ್ಳಿ ಕೆರೆಯು ತಲಪಾಡಿಗೆ ಸೇತುವೆಯನ್ನು ರಚಿಸುವುದು

ಶ್ರೀ ಬಿ. ಕೃಷ್ಣಪ್ಪ (ಚಿಕ್ಕನಾಯ್ಕನಹಳ್ಳಿ). —ಮಾನ್ಯ ಅಧ್ಯಕ್ಷರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಬಂಡಿಕೆರೆ ಹೋಬಳಿ ಗುಬ್ಬಿನಹಳ್ಳಿ ಕೆರೆಯು ಬಹಳಷ್ಟು ಅಪಾಯಕಾರಿಯಾಗಿ ಒಡುತ ಹಳ್ಳ ಹರಿಯುತ್ತಿದ್ದು, ಈ ಹಳ್ಳಕ್ಕೆ ಸೇತುವೆ ಮಾಡಿ ಪೈಪಿನ ಮೂಲಕ ಪುಂಡಿನ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಬೇಕಾಗಿದೆ ಈ ಪೈಪು ಚಾನಲ್ ಮಾಡಲು ಉದ್ದೇಶಿಸಿ ಪೈಪುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಹಾಕಿ ಇಲ್ಲಿಗೆ